ISSN: 2582-2284

ಸಂಪುಟ 2 ಸಂಚಿಕೆ 6 ಮೇ-ಜೂನ್ 2021

# ಪ್ರತಿಬಿಂಬ

## MULTIDISCIPLINARY KANNADA RESEARCH JOURNAL OF IIMRD

Peer Reviewed and Refereed Kannada Journal

IIMRD JOURNALS

ಭಾರತೀಯ ಬಹುಶಿಸ್ತೀಯ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ
ಮೈಸೂರು

| | ಅನುಕ್ರಮಣಿಕೆ | ಪು.ಸಂ |
|---|---|---|
| 1. | ಬೆಳಗಾವಿ ಜಿಲ್ಲೆಯ ಐತಿಹ್ಯ : ಒಂದು ಅಧ್ಯಯನ – *ಶ್ರೀಮತಿ. ಶಿಲ್ಪಾ ಯ ಮುದಕಪ್ಪಗೋಳ* <br> – *ಡಾ. ಸಿ. ಬಿ ತಬೋಜಿ* | 1 |
| 2. | ಕಣಿಯನ್ ಸಮುದಾಯದ ಸಾಮಾಜಿಕ ವ್ಯವಸ್ಥೆ – *ಲೋಕೇಶ್ ಎಸ್* <br> – *ಡಾ. ಎಚ್.ಎಂ. ಮರಳುಸಿದ್ಧಯ್ಯ* | 7 |
| 3. | ಕನ್ನಡ ಸಾಹಿತ್ಯ : ಗದ್ಯ ಪರಂಪರೆ – *ಡಾ. ಎಸ್. ಬಿ. ರಾಠೋಡ* | 14 |
| 4. | ಮೈಸೂರು ಜಿಲ್ಲೆಯ ಬುಡಕಟ್ಟು ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು – *ಡಾ. ಬಿ.ಆರ್.ಮಂಜುನಾಥ* <br> – *ಪ್ರೊ. ಎಂ.ಆರ್. ಗಂಗಾಧರ್* | 22 |
| 5. | ಮೈಸೂರು ಸಂಸ್ಥಾನದ ಅಭಿವೃದ್ಧಿಗೆ ದಿವಾನ್ ಶೇಷಾದ್ರಿ ಅಯ್ಯರ್ ಕೈಗೊಂಡ ಕ್ರಮಗಳು: ಒಂದು ಅಧ್ಯಯನ – *ದಾಸಪ್ರಕಾಶ್ ಆರ್.ಕೆ* | 27 |
| 6. | ಗ್ರಾಮೀಣ ಕೃಷಿಕರ ಮದ್ಯಪಾನದ ಸಮಸ್ಯೆಗೆ ಕಾರಣ ಮತ್ತು ಅದರಿಂದಾಗುವ ಪರಿಣಾಮಗಳು: ಸಮಾಜಶಾಸ್ತ್ರೀಯ ವಿಶ್ಲೇಷಣೆ – *ದರ್ಶನ್ ಎಚ್.ಟಿ* <br> – *ಆರ್ ಕೆಂಪೇಗೌಡ* | 34 |
| 7. | ಮಲ್ಲಿಕಾರ್ಜುನ ದೇವಾಲಯದ ಗಾರೆ ಶಿಲ್ಪಗಳು : ಒಂದು ಅಧ್ಯಯನ <br> – *ಕವಿತ* <br> – *ಡಾ. ಆರ್.ಕವಿತ* | 41 |
| 8. | ತಳವಾರಿಕೆ ವೃತ್ತಿ : ಒಂದು ವಿಶ್ಲೇಷಣೆ – *ಸಚಿನಕುಮಾರ ಕಳಕಪ್ಪ ತಳವಾರ* | 47 |
| 9. | ಮಹಿಳಾ ಐತಿಹ್ಯಗಳ ವೈಶಿಷ್ಟ್ಯತೆ – *ನಿರ್ಮಲ ಎಸ್* | 54 |
| 10. | ಕನ್ನಡ ಸಾಹಿತ್ಯಕ್ಕೆ ಡಾ. ಹಜರತಅಲಿ ಇ ತಿಮ್ಮಾಪೂರರವರ ಕೊಡುಗೆ <br> – *ಡಾ. ಎಂ.ಆರ್.ದೊಡಮನಿ* | 65 |
| 11. | ಶರಣ ಕೆಂಭಾವಿಯ ಚಂದಿಮರಸ – *ಡಾ. ರಾಮರೆಡ್ಡಿ ಎಸ್. ರಡ್ಡೇರ* | 72 |
| 12. | ಪ್ರಾಚೀನ ಕರ್ನಾಟಕದ ಪ್ರಮುಖ ವಿದ್ಯಾಕೇಂದ್ರಗಳು – *ಬಾಬುರಾಯ ದೊರೆ* | 83 |
| 13. | ವಿ. ಸೀತಾರಾಮಯ್ಯನವರ ಬದುಕು-ಬರಹ – *ವೆಂಕೋಬರಾವ್.ಎಂ* | 91 |
| 14. | ಮಹಾತ್ಮ ಗಾಂಧೀಜಿಯವರ ಹರಿಜನೋದ್ಧಾರ ಕಾರ್ಯಕ್ರಮಗಳು ಮತ್ತು ಅದರ ಪ್ರಸ್ತುತತೆ <br> – *ಆನಂದ ಎಸ್* | 98 |

ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 6, MAY-JUNE 2021, 14-21
©IIMRD, Mysuru
IIMRD JOURNALS
www.iimrd.com

# ಕನ್ನಡ ಸಾಹಿತ್ಯ : ಗದ್ಯ ಪರಂಪರೆ

ಡಾ. ಎಸ್. ಬಿ. ರಾಠೋಡ[1]

## ಪೀಠಿಕೆ

ಕ್ರಿಸ್ತಪೂರ್ವ ಇತಿಹಾಸ ಹೊಂದಿರುವ ಕನ್ನಡ ಸಾಹಿತ್ಯ ಪರಂಪರೆಗೆ, ರಂ. ಶ್ರೀ ಮುಗ
ಕೊಟ್ಟ ರೂಪಕ ಅದ್ಭುತವಾದದ್ದು. ಹಿಮಾಲಯದ ಪರ್ವತರಾಜಿಯನ್ನು ಹತ್ತಿರದ ಯಾವದೊ
ಒಂದು ನೆಲೆಯಿಂದ ನೋಡುವಾಗ ಕೆಲವು ಉನ್ನತ ಶಿಖರಗಳು ಕಣ್ಣಿಗೆ ಬೀಳುತ್ತವೆ. ಅವುಗಳ ಹಿಂ
ಸಾಲುಸಾಲಾಗಿ ಮಂಜು ಮುಸುಕಿನಲ್ಲಿ ಮರೆಯಾದ ಶಿಖರಗಳೂ ಇರುತ್ತವೆ. ಮಂಜು ಸ್ವ
ಸರಿದಾಗ ನಾವು ತೀಕ್ಷ್ಣವಾಗಿ ಹರಿತ ನೋಟದಲ್ಲಿ ಮರೆಯಾದ ಶಿಖರಗಳು ಇರುವದನ್ನು ನಾವ
ನೆನಪಿಸಿಕೊಳ್ಳುತ್ತೇವೆ. ಅವುಗಳ ಸ್ವರೂಪ ದೂರದಿಂದ ಗುರುತಿಸಲು ಹವಣಿಸುತ್ತೇವೆ.[1] ಹಾಗೆಯೆ
ಯಾವುದೇ ಭಾಷೆಯ ಸಾಹಿತ್ಯದ ಅತಿ ಮೊದಲಿನ ಪರಿಕರಗಳನ್ನು ನಾವು ಅರಿತುಕೊಳ್ಳು
ರೀತಿಯು ಹಿಗೆಯೇ ಇರುತ್ತದೆ. ಕನ್ನಡ ಸಾಹಿತ್ಯದ ಪರಂಪರೆ 450 ರ ಆಚೆ ಬಹುಶ: ದೂರದ
ಕಂಡು ಮರೆಯಾದ ಶಿಖರದಂತೆ ಎಂದೆನಿಸುತ್ತದೆ.

ದ್ರಾವಿಡ ಭಾಷೆಗಳಲ್ಲಿ ಒಂದಾದ ಕನ್ನಡ ಭಾಷೆ, ಕರ್ನಾಟಕ ರಾಜ್ಯಭಾಷೆಯಾಗಿ ಪ್ರಖ
ಪಡೆದುಕೊಂಡಿದೆ. ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ ಎರಡು ಕೋಟಿ ಜನ ಕನ್ನಡವ
ನಿರರ್ಗಳವಾಗಿ ಮಾತನಾಡುತ್ತಿದ್ದರು. ಇವತ್ತು ಸುಮಾರು ಏಳು ಕೋಟಿ ಜನ ಕನ್ನಡ ಭಾಷೆಯನ
ಮಾತನಾಡುತ್ತಿದ್ದಾರೆ. ಕನ್ನಡ ಬಾಷೆಗೆ ಕನಿಷ್ಠ ಎರಡುವರೆ ಸಾವಿರ ವರ್ಷಗಳ ಇತಿಹಾಸವಿದೆ. ಕ್ರಿ
ಪ್ರಾರಂಭ ಕಾಲದಲ್ಲಿ ಟಾಲೆಮಿ ಎಂಬ ಗ್ರೀಕ್ ಭೂಗೋಳಶಾಸ್ತ್ರಜ್ಞನು ಬಾದಾಮಿ, ಇಂಡಿ, ಕಲಕೇ
ಮುದಗಲ್ಲು ಮುಂತಾದ ಹೆಸರುಗಳನ್ನು ತನ್ನ ಗ್ರಂಥದಲ್ಲಿ ಸೂಚಿಸಿದ್ದಾನೆ. ಕ್ರಿ.ಶ 200ರಲ್ಲಿ
ಹಾಲರಾಜನ 'ಗಾಥಾಸಪ್ತಸತಿ' ಎಂಬ ಪ್ರಾಕೃತ ಪದ್ಯ ಸಂಕಲನದಲ್ಲಿ ಕನ್ನಡ ಶಬ್ದಗಳನ
ಬಳಸಿದ್ದಾನೆ. ಕರ್ನಾಟ, ಕುಂತಲ ಎಂಬ ದೇಶವಾಚಕ ಶಬ್ದಗಳು ಮಹಾಭಾರತ ಮತ್ತು ಪಾಣಿ
ವ್ಯಾಕರಣ ಗ್ರಂಥಗಳಲ್ಲಿ ಬಂದಿರುತ್ತವೆ. 'ಕರ್ನಾಟ' ಎಂಬುವುದು ಹೇಗೆ ಬಂತು ಹಲವಾ
ಊಹೆಗಳು ಕಾಣುತ್ತೇವೆ.

[1] *ಮುಖ್ಯಸ್ಥರು, ಕನ್ನಡ ವಿಭಾಗ ಹಾಗೂ ಸಂಶೋಧನಾ ಮಾರ್ಗದರ್ಶಕರು (ಹಂಪಿ.ವಿ.ವಿ), ಎಸ್.ಎಸ್. ಕಲಾ ಹಾ
ವಾಣಿಜ್ಯ ಮಹಾವಿದ್ಯಾಲಯ, ಚಡಚಣ.*